ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2009
ಮಾನ್ಯ ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)
ವಿಷಯ	:	ಬೀದರ್ ಜಿಲ್ಲೆಯ ಕೋಟೆಯನ್ನು ಅಭಿವೃದ್ಧಿಪಡಿಸುವ ಕುರಿತು.
ಉತ್ತರಿಸುವ ದಿನಾಂಕ	:	27.03.2020
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯ ಕೋಟೆಯನ್ನು ಅಭಿವೃದ್ಧಿ ಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	2016–17ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳನ್ನು ರೂ.10.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಮಾದರಿ ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. ಸದರಿ ಘೋಷಣೆಯನ್ವಯ ಬೀದರ್ ಜಿಲ್ಲೆಯಲ್ಲಿರುವ ಬೀದರ್ ಕೋಟೆಯನ್ನು ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ದಿನಾಂಕ:23.04.2016ರ ಆದೇಶದಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ. ಬೀದರ್ ಕೋಟೆಯು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಸರ್ಕಾರವು ನೀಡಿರುವ ತಾತ್ವಿಕ ಅನುಮೋದನೆಯಂತೆ ರೂ.200.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ದಿನಾಂಕ:16.05.2017 ಮತ್ತು 04.11.2017ರ ಪತ್ರಗಳಲ್ಲಿ ಕೋರಲಾಗಿತ್ತು. ಆದರೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಂದಾಜು ಪಟ್ಟಿ ಸಲ್ಲಿಸಿಲ್ಲದಿರುವುದರಿಂದ, ಸದರಿ ಕಾಮಗಾರಿಯನ್ನು ದಿನಾಂಕ:20.07.2019ರ ಆದೇಶದಲ್ಲಿ ರದ್ದುಪಡಿಸಲಾಗಿರುತ್ತದೆ.
ಆ)	ಬಂದಿದ್ದಲ್ಲಿ, ಈ ಕೋಟೆಯ ನಿರ್ವಹಣೆಯ ರೂಪುರೇಷೆಗಳೇನು; ಟೆಂಡರ್ ಪ್ರಕಾರ ಈ ಕೋಟೆಯ ಅಳತೆ ಎಷ್ಟು; ಟೆಂಡರ್ ದರಗಳ ಸಂಪೂರ್ಣ ವಿವರ ನೀಡುವುದು;	ಅನ್ವಯಿಸುವುದಿಲ್ಲ
ಇ)	ಈ ಕೋಟೆ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಯಾವ ಯಾವ ಲೆಕ್ಕಶೀರ್ಷಿಕೆಗಳಡಿಯಲ್ಲಿ ಎಷ್ಟೆಷ್ಟು ಅನುದಾನ ಮಂಜೂರಾಗಿದೆ; ಖರ್ಚಾದ ಹಣ ಹಾಗೂ ಉಳಿಕೆಯಾಗಿರುವ ಹಣ ಎಷ್ಟು;	
ಈ)	ಬೀದರ್ ಕೋಟೆ ಅಭಿವೃದ್ಧಿಗೆ ಇನ್ನೂ ಬೇಕಾಗಿರುವ ಹಣವೆಷ್ಟು; ಹಣ ಬಿಡುಗಡೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು; ಬಿಡುಗಡೆಗೊಳಿಸುವುದು ಯಾವಾಗ: (ವಿವರ ನೀಡುವುದು)	

ಕಡತ ಸಂಖ್ಯೆ: ಟಿಓಆರ್ 125 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.